C.C.. No. 605/2024 CW: 1 ,PW: 1

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 605/2024

ಸಿ.ಡಬ್ಲ್ಯೂಃ 1

ಪಿ.ಡಬ್ಲ್ಯೂಃ 1

ಸಾಕ್ಷಿದಾರರ ಹೆಸರುಃ ಸಂತೋಷ್ ಬಿ.ಕೆ.

ತಂದೆಯ ಹೆಸರುಃ ಕೊರಗಪ್ಪ ನಾಯ್ಕ

ವಯಸ್ಸುಃ 34 ವರ್ಷ

ಉದ್ಯೋಗಃ ಶೋರ್ ರೂಂ ನಲ್ಲಿ ಕೆಲಸ

ವಾಸಸ್ಥಳಃ ಮುಂಡೂರು ಗ್ರಾಮ

ದಿನಾಂಕ 11-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರ ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು. ಚಾ.ಸಾ.2 ನನ್ನ ತಾಯಿ. ಚಾ.ಸಾ.5 ನನ್ನ ತಂದೆ. ಚಾ.ಸಾ.3 ನನ್ನ ತಮ್ಮನ ಹೆಂಡತಿ. ಚಾ.ಸಾ.4 ನನ್ನ ಹೆಂಡತಿ. ಚಾ.ಸಾ.6 ನನ್ನ ತಮ್ಮ. ನಮ್ಮ ಮನೆ ಮುಂಡೂರು ಗ್ರಾಮದ ಬರೆಕೋಡಿ ಎಂಬಲ್ಲಿ ಇದೆ. ಅಲ್ಲಿ ನಾನು ಚಾ.ಸಾ.2 ರಿಂದ ಚಾ.ಸಾ.6 ರವರ ಜೊತೆ ವಾಸವಾಗಿದ್ದೇನೆ.

ನಮ್ಮ ಮತ್ತು ಆರೋಪಿತರ ನಡುವೆ ಜಾಗದ ಬಗ್ಗೆ ತಕರಾರು ಇಲ್ಲ. ಆರೋಪಿತರು ನನ್ನನ್ನು ತಡೆದು ನಿಲ್ಲಿಸಿ ಮರದ ದೊಣ್ಣೆಯಿಂದ , ಹೆಲ್ಮೆಟ್ ನಿಂದ ಹಾಗೂ ಕೈಯಿಂದ ಹಲ್ಲೆ ಮಾಡಿಲ್ಲ, ಜೀವಬೆದರಿಕೆ ಹಾಕಿಲ್ಲ. ಚಾ.ಸಾ.2 ರವರಿಗೆ ಮರದ ದೊಣ್ಣೆಯಿಂದ ಆರೋಪಿತರು ಹಲ್ಲೆ ಮಾಡಿಲ್ಲ.

ಸುಮಾರು 2 ವರ್ಷಗಳ ಹಿಂದೆ ನಾನು ನನ್ನ ಮೋಟಾರ್ ಸೈಕಲಿನಲ್ಲಿ ಚಾ,ಸಾ.2ರವರನ್ನು ಸಹ ಸವಾರರನ್ನಾಗಿ ಕುಳ್ಳಿರಿಸಿಕೊಂಡು ಹೋಗುತ್ತಿರುವಾಗ ಬೈಕ್ ಸ್ಕಿಡ್ ಆಗಿ ನನಗೆ ಮತ್ತು ಚಾ,ಸಾ.2 ರವರಿಗೆ ಗಾಯಗಳಾಗಿದ್ದು ಆಗ ನನ್ನ ತಮ್ಮನಾದ ಚಾ.ಸಾ.6 ರವರು ಅಲ್ಲಿಗೆ ಬಂದು ನಮ್ಮನ್ನು ಪುತ್ತೂರಿನ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲು ಮಾಡಿದ್ದರು ನನಗೆ ಹಣೆಗೆ , ಬೆನ್ನಿಗೆ ಹಾಗೂ ಎದೆಗೆ ಗಾಯವಾಗಿತ್ತು. ಚಾ.ಸಾ.2 ರವರ ಬೆನ್ನಿಗೆ ಹಾಗೂ ಎಡಕಾಲಿಗೆ ಗಾಯಗಳಾಗಿತ್ತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆಕೊಟ್ಟಿಲ್ಲ. ನಿ.ಪಿ.1 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ.

ಸಾಕ್ಷಿಗೆ 3 ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳಲ್ಲಿರುವ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ನಿ.ಪಿ.2 ರಿಂದ ನಿ.ಪಿ.4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.2(ಎ) ಯಿಂದ ನಿ.ಪಿ.4(ಎ) ಎಂದು ಗುರುತಿಸಲಾಯಿತು. ಸುಮಾರು 2 ವರ್ಷಗಳ ಹಿಂದೆ ನಿ.ಪಿ.2 ರಿಂದ ನಿ.ಪಿ.4 ಕ್ಕೆ ಕ್ಕೆ ಸಂಪ್ಯ ಪೊಲೀಸು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರನ್ನು ಮಾಡಿಲ್ಲ, ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿಲ್ಲ. ನಿ.ಪಿ.2 ರಿಂದ ನಿ.ಪಿ.4 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ.

ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ಹೆಲ್ಮೆಟ್ , ಮರದ ದೊಣ್ಣೆ ,ಕುಟ್ಟಿಕತ್ತಿ ಹಾಗೂ ವಾಚನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ನಾನು ಯಾವುದೇ ಮರುಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 15-01-2024 ರಂದು ಸಂಜೆ 07.30 ಗಂಟೆಗೆ ಮುಂಡೂರು ಗ್ರಾಮದ ಬರೆಕೋಲಾಡಿ ಎಂಬಲ್ಲಿ 1ನೇ ಆರೋಪಿಯ ಜಾಗದಲ್ಲಿರುವ ರಸ್ತೆಯಲ್ಲಿ ಚಾ,ಸಾ.2 ರಿಂದ 5 ರವರು ಅಟೋ ರಿಕ್ಷಾದಲ್ಲಿ ಮರದ ಮಂಚವನ್ನು ತಂದ ವಿಚಾರವಾಗಿ ಆರೋಪಿಗಳು ಚಾ.ಸಾ.2 ರಿಂದ 5 ರವರ ಜೊತೆ ಜಗಳ ಮಾಡಿರುವ ವಿಚಾರವನ್ನು ಚಾಸಾ.4 ರವರು ನನಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ರಾತ್ರಿ 08.00 ಗಂಟೆಯಿಂದ 08.15ರ ಮಧ್ಯದಲ್ಲಿ ನಾನು ನನ್ನ ಬೈಕನ್ನು ರಸ್ತೆ ಬದಿ ನಿಲ್ಲಿಸಿ ಕೃಷ್ಣ ನಾಯ್ಕ ಎಂಬುವವರಿಗೆ ಸೇರಿದ ಅಡಿಕೆ ತೋಟದ ಮಧ್ಯೆ ಇರುವ ಕಾಲುದಾರಿಯಲ್ಲಿ ನನ್ನ ಮೊಬೈಲ್ ನ ಟಾರ್ಜ್ ಲೈಟ್ ಆನ್ ಮಾಡಿ ನಡೆದುಕೊಂಡು ನನ್ನ ಮನೆಯ ಕಡೆ ಹೋಗುತ್ತಿರುವ ಸಮಯ ಆರೋಪಿಗಳು ನನ್ನನ್ನು ತಡೆದು ನಿಲ್ಲಿಸಿ 1ನೇ

ಆರೋಪಿಯು ಮರದ ದೊಣ್ಣೆಯಿಂದ ನನ್ನ ಬೆನ್ನಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2ನೇ ಆರೋಪಿಯು ನನ್ನ ಕೈಯಲ್ಲಿದ್ದ ಹೆಲ್ಮೆಟ್ ನ್ನು ಎಳೆದುಕೊಂಡು ಅದೇ ಹೆಲ್ಮೆಟ್ನಿಂದ ನನ್ನ ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಬೊಬ್ಬೆ ಹಾಕಿದಾಗ ಚಾ.ಸಾ.2 ರವರು ಸ್ಥಳಕ್ಕೆ ಬಂದಾಗ 1ನೇ ಆರೋಪಿ ಮರದ ದೊಣ್ಣೆಯಿಂದ ಚಾ.ಸಾ.2 ರವರ ಎಡಕಾಲಿಗೆ ಹೊಡೆದಿರುವುದಾಗಿ ಅಲ್ಲದೆ 3ನೇ ಆರೋಪಿ ಕೈಯಿಂದ ನನ್ನ ಬೆನ್ನಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯ ನಮ್ಮ ಬೊಬ್ಬೆ ಕೇಳಿ ಚಾ,ಸಾ.2 , ಚಾ.ಸಾ.3 ಮತ್ತು ಚಾ.ಸಾ.5 ರವರು ಬರುವುದನ್ನು ನೋಡಿ 3ನೇ ಆರೋಪಿಯು ತನ್ನ ಕೈಯಲ್ಲಿದ್ದ ಕತ್ತಿಯನ್ನು ಹಿಡಿದು ನಮ್ಮನ್ನು ಸಾಯಿಸುತ್ತೇನೆ ಎಂದು ಜೀವಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ಸ್ವತ್ತುಗಳನ್ನು ಅಲ್ಲೇ ಬಿಸಾಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ.

ನನ್ನನ್ನು ಮತ್ತು ಚಾ.ಸಾ.2 ರವರನ್ನು ಚಾ,ಸಾ.6 ರವರು ಅಟೋ ರಿಕ್ಷಾದಲ್ಲಿ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಪೊಲೀಸರು ಆಸ್ಪತ್ರೆಗೆ ಬಂದು ನಿ.ಪಿ.1 ರಂತೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 17-01-2024 ರಂದು ಪುತ್ತೂರು ತಾಲೂಕು ಮುಂಡೂರು ಗ್ರಾಮದ ಪರಿಕುಲಾಡಿ ಎಂಬಲ್ಲಿಗೆ ಪೊಲೀಸರು ಬಂದಾಗ ನಾನು ಪೊಲೀಸರಿಗೆ ಘಟನೆ ನಡೆದ ಸ್ಥಳಗಳನ್ನು ತೋರಿಸಿಕೊಟ್ಟ ಮೇರೆಗೆ ಪೊಲೀಸರು ಚಾ,ಸಾ.9 ಮತ್ತು ಚಾಸಾ.10 ರವರ ಸಮಕ್ಷಮ ನಿ.ಪಿ.2 ರಂತೆ ಸ್ಥಳ ಮಹಜರನ್ನು, ನಿ.ಪಿ.3 ಮತ್ತು ನಿ.ಪಿ.4 ರಂತೆ ನಕಾಶೆಯನ್ನು ತಯಾರಿಸಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.2 ರ ಕಾಲಕ್ಕೆ ಪೊಲೀಸರು ಆರೋಪಿತರು ಕೃತ್ಯಕ್ಕೆ ಬಳಸಿದ ಹೆಲ್ಮೆಟ್ , ಮರದ ದೊಣ್ಣೆ ,ಕುಟ್ಟಿ ಕತ್ತಿ ಹಾಗೂ ವಾಚನ್ನು ತಮ್ಮ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 17-01-2024 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ಮೇಲೆ ಕಾಣಿಸಿದ ವಿಳಾಸದಲ್ಲಿ ------------------------------------------------------- ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ.'' ಎಂದು ಮರುಹೇಳಿಕೆಯನ್ನು ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು.

ಆರೋಪಿತರೊಂದಿಗೆ ಪ್ರಸ್ತುತ ರಾಜಿಯಾಗಿದ್ದೇವೆ. ಆರೋಪಿತರೊಂದಿಗೆ ರಾಜಿಯಾದ ಕಾರಣ ಅವರನ್ನು ಶಿಕ್ಷೆಯಿದ ರಕ್ಷಿಸುವ ಸಲುವಾಗಿ ಆರೋಪಿಗಳು ನಮ್ಮ ವಿರುದ್ದ ಅಪರಾಧಿಕ ಕೃತ್ಯಗಳನ್ನು ಎಸೆಗಿದರೂ ಕೂಡಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ.ಅರ್.ಎನ್. ವಕೀಲರಿಂದಃ**

ಏನೂ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.